# ಕರ್ನಾಟಕ ಲೋಕಾಯುಕ್ತ

**ಸಂ:ಕಂಪ್ಲೇಂಟ್/ಉಪಲೋಕ್/ಬಿ.ಜಿಎಂ./1556/2022**
**ಪಿ.ಓ.ಎ.ಆರ್.ಇ–06 (ಮಂಡನಾಧಿಕಾರಿಗಳ ಶಾಖೆ).**

ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ: 16/09/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

**ವಿಷಯ:–** ಡಾ॥ ಎಲ್.ಎಲ್. ರಾಥೋಡ್ ಬಿನ್ ಲಕ್ಷ್ಮಣ, ಹಿರಿಯ ತಜ್ಞರು, ಜಿಲ್ಲಾ ಆಸ್ಪತ್ರೆ, ಹಾವೇರಿ ರವರು ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.

*****

1. ಹಾವೇರಿ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **ಡಾ॥ ಎಲ್.ಎಲ್. ರಾಥೋಡ್ ಬಿನ್ ಲಕ್ಷ್ಮಣ, ಹಿರಿಯ ತಜ್ಞರು, ಜಿಲ್ಲಾ ಆಸ್ಪತ್ರೆ, ಹಾವೇರಿ ಜಿಲ್ಲೆ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). **ಶ್ರೀ. ಕೆ. ರಾಮರೆಡ್ಡಿ, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಹಾವೇರಿ** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ಠಾಣೆಯ ಆರು ಜನ ಸಿಬ್ಬಂದಿಯವರ ವೈದ್ಯಕೀಯ ಪರೀಕ್ಷೆಮಾಡಿ ಪ್ರಮಾಣಪತ್ರ ನೀಡುವ ಬಗ್ಗೆ ಎದುರುದಾರರನ್ನು ಭೇಟಿ ಮಾಡಿದಾಗ, ಅವರು 600/–ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :–**

i) ಶ್ರೀ. ಆನಂದ್ ಷ. ತಳಕಲ್, ಸಿಪಿಸಿರವರು ಕರ್ನಾಟಕ ಲೋಕಾಯುಕ್ತ ಪೊಲೀಸ್ ಸಿಬ್ಬಂದಿ ಇದ್ದು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ರಾಜ್ಯ ಸರ್ಕಾರವು 6ನೇ ವೇತನ ಆಯೋಗ ನೀಡಿದ್ದರಿಂದ ವೇತನದಲ್ಲಿ ಏರಿಕೆಯಾಗಿದ್ದು, ವೇತನಕ್ಕನುಗುಣವಾಗಿ ಕೆ.ಜಿ.ಐ.ಡಿ. ಕಂತು ಹೆಚ್ಚು ಮಾಡಿಸುವ ಸಲುವಾಗಿ ದಿ: 07/07/2018ರಂದು ಬೆಳಿಗ್ಗೆ 11.15 ಗಂಟೆಗೆ ಕಛೇರಿಯ ಇತರೆ ಸಿಬ್ಬಂದಿಯವರಾದ (1) ಶ್ರೀ. ಸಿ.ಎಂ. ಬಾರ್ಕಿ, ಸಿಹೆಚ್‌ಸಿ, (2) ಶ್ರೀ. ಎಸ್.ಸಿ. ಮುಗದೂರ, ಸಿಹೆಚ್‌ಸಿ, (3) ಶ್ರೀ. ಎಂ.ಕೆ. ನಧಾಫ್, ಸಿಹೆಚ್‌ಸಿ, (4) ಶ್ರೀ. ಜಿ.ಸಿ.

ಸಂಕಪ್ಪನವರ, ಎಪಿಸಿ, (5) ಶ್ರೀ. ಬಿ.ಎಸ್. ಸಂಕಣ್ಣನವರ್ ಎಪಿಸಿರವರುಗಳೊಂದಿಗೆ ಪ್ರಸ್ತಾವನೆ ಅರ್ಜಿಗಳನ್ನು ತುಂಬಿಕೊಂಡು ವೈದ್ಯಕೀಯ ಪರೀಕ್ಷೆ ಮಾಡಿಸುವ ಸಲುವಾಗಿ ಹಾವೇರಿ ಜಿಲ್ಲಾ ಆಸ್ಪತೆಯಲ್ಲಿ ಕರ್ತವ್ಯದ ಮೇಲಿದ್ದ ಎದುರುದಾರರನ್ನು ಭೇಟಿಯಾಗಿ, ಅವರನ್ನು ಪರಿಚಯಿಸಿಕೊಂಡು, ಕೆ.ಜಿ.ಐ.ಡಿ. ಮಾಡಿಸುವ ಸಲುವಾಗಿ ತಮ್ಮಗಳ ವೈದ್ಯಕೀಯ ಪರೀಕ್ಷೆಮಾಡಿ ವರದಿ ನೀಡಲು ಕೋರಿಕೊಂಡಿರುತ್ತಾರೆ. ಆಗ ಎದುರುದಾರರು ವೈದ್ಯಕೀಯ ಪರೀಕ್ಷೆ ಮಾಡಲು ತಲಾ 100/– ರೂ. ಆಗುತ್ತದೆ ಎಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟು ನಂತರ ಯಾವುದೇ ವೈದ್ಯಕೀಯ ಪರೀಕ್ಷೆ ಮಾಡದೆ ಕಾಲಂ (1) ರಿಂದ (14)ರವರೆಗೆ ನೀವುಗಳೇ ಭರ್ತಿಮಾಡಿಕೊಂಡು ಬನ್ನಿ ಎಂದು ತಿಳಿಸಿದ ಮೇರೆಗೆ ಅವರುಗಳು ಅವರ ಸ್ವಹಸ್ತಾಕ್ಷರದಲ್ಲಿ ಭರ್ತಿಮಾಡಿಕೊಂಡು ಎದುರುದಾರರಿಗೆ ನೀಡಿರುತ್ತಾರೆ. ನಂತರ ಉಳಿದ ಕಾಲಂಗಳನ್ನು ಎದುರುದಾರರು ಭರ್ತಿಮಾಡಿ ಅವರ ಸಹಿಯನ್ನು ಮಾಡಿ ತಲಾ 100/– ರೂ.ಗಳಂತೆ ಯಾವುದೇ ರಶೀದಿ ನೀಡದೆ ಒಟ್ಟು 600/– ರೂ. ಲಂಚದ ಹಣವನ್ನು ಕೇಳಿ ಪಡೆದುಕೊಂಡಿದ್ದನ್ನು ದೋ.ಪ.ಸಾಕ್ಷಿ–4 ರವರಾದ ಶ್ರೀ ಆನಂದ ಷ. ತಳಕಲ್‌ರವರ ಬಳಿ ಇದ್ದ ಮೊಬೈಲ್‌ನಲ್ಲಿ ಆಡಿಯೋ ಮತ್ತು ವಿಡಿಯೋ ಚಿತ್ರೀಕರಣ ಮಾಡಿಕೊಂಡಿದ್ದು, ನಂತರ ಲೋಕಾಯುಕ್ತ ಕಛೇರಿಗೆ ಬಂದು ಡೆಸ್ಕ್ ಟಾಪ್ ಮುಖಾಂತರ ಡಿ.ವಿ.ಡಿ.ಗೆ ವರ್ಗಾಯಿಸಿ, ಆ ಡಿ.ವಿ.ಡಿ.ಯನ್ನು ಮತ್ತು ವೈದ್ಯಕೀಯ ಪರೀಕ್ಷೆಯ ವರದಿಯ ನಕಲು ಪ್ರತಿಗಳನ್ನು ಲಗತ್ತಿಸಿ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಹಾವೇರಿರವರಿಗೆ ದಿ: 10/07/2018ರಂದು ವರದಿ ಸಲ್ಲಿಸಿರುತ್ತಾರೆ.

ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರು ಆ ವರದಿಯನ್ನು ಪೊಲೀಸ್ ನಿರೀಕ್ಷಕರಾದ ಶ್ರೀ. ಕೆ. ರಾಮರೆಡ್ಡಿರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಆದೇಶಿಸಿದ ಮೇರೆಗೆ ಶ್ರೀ. ಕೆ. ರಾಮರೆಡ್ಡಿರವರು ವಿವರವಾದ ವಿಚಾರಣೆಯನ್ನು ಮಾಡಿ, ವಿಚಾರಣಾ ವರದಿಯನ್ನು ಅಪರ ಪೊಲೀಸ್ ಮಹಾ ನಿರ್ದೇಶಕರು, ಭ್ರಷ್ಟಾಚಾರ ನಿಗ್ರಹದಳ, ಬೆಂಗಳೂರುರವರಿಗೆ ಸಲ್ಲಿಸಿದ್ದು, ಅವರು ಅದನ್ನು ಎಸ್.ಪಿ., ಎಸಿಬಿ ಪೂರ್ವ ವಲಯ ದಾವಣಗೆರೆರವರಿಗೆ ಕಳುಹಿಸಿಕೊಟ್ಟಿರುತ್ತಾರೆ. ಅವರ ಕಛೇರಿಯ ಕ್ರಮ ಸಂಖ್ಯೆ: ನಂ/ ಎಸ್‌ಪಿ / ಎಸಿಬಿ /ಇಆರ್ / ಡಿವಿಜಿ / ಲೋಕ್/ಹೆಚ್‌ಪೆಟ್.08 /2019, ದಿ: 27/04/2019ರ ಆದೇಶದನ್ವಯ ಹಾವೇರಿ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಗುನ್ನೆ ನಂ.08/2019ರಲ್ಲಿ ಕಲಂ 7, 13(1) (ಡಿ) ಸಹಿತ

13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ, 1988ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

ii) ಪಂಚಸಾಕ್ಷಿದಾರರಾದ ಶ್ರೀ ರಮೇಶ ತಂದೆ ನಿಂಗಪ್ಪ ಮಣೇಗಾರ, ಎಸ್.ಡಿ.ಎ. ಗ್ರಾಮ ಪಂಚಾಯತಿ ಕರ್ಜಿಗು ಮತ್ತು ಶ್ರೀ ನವೀನ್ ಟಿ. ಕೆ. ತಂದೆ ಕಂಡೋಜಿ, ಲೆಕ್ಕ ಸಹಾಯಕರು, ಗ್ರಾಮ ಪಂಚಾಯತಿ, ಹಂದಿಗನೂರು, ತಾ: ಹಾವೇರಿ ಇವರುಗಳನ್ನು ದಿ: 30/07/2019ರಂದು ತನಿಖಾಧಿಕಾರಿಯವರು ಠಾಣೆಗೆ ಕರೆಯಿಸಿ ದೂರಿನ ಮಾಹಿತಿಯನ್ನು ನೀಡಿ ತನಿಖೆಗೆ ಸಹಕರಿಸುವಂತೆ ತಿಳಿಸಿದಾಗ, ಪಂಚಸಾಕ್ಷಿದಾರರು ಪಂಚರಾಗಿ ಸಹಕರಿಸಲು ಒಪ್ಪಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರು ವರದಿಯೊಂದಿಗೆ ಹಾಜರುಪಡಿಸಿದ ಡಿ.ವಿ.ಡಿ.ಯನ್ನು ಪಂಚರ ಸಮಕ್ಷಮ ಲ್ಯಾಪ್‌ಟಾಪ್‌ಗೆ ಹಾಕಿ ಕೇಳಿಸಲಾಗಿ ಮತ್ತು ನೋಡಲಾಗಿ ಅದರಲ್ಲಿ ಸಂಭಾಷಣೆಗಳು ಮತ್ತು ವೀಡಿಯೋ ಕ್ಲಿಪಿಂಗ್ಸ್‌ಗಳಿದ್ದು, ಆ ಡಿ.ವಿ.ಡಿ.ಯಲ್ಲಿರುವ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿಕೊಂಡಿರುತ್ತಾರೆ. ನಂತರ ಡಿ.ವಿ.ಡಿ.ಯಲ್ಲಿರುವ ಮಾಹಿತಿಯನ್ನು ಬೇರೊಂದು ಸಿ.ಡಿ.ಗೆ ವರ್ಗಾಯಿಸಿ, ತನಿಖಾಧಿಕಾರಿಯವರು ತದ್ರೂಪಿ ಸಿ.ಡಿ.ಯನ್ನು ಅವರ ಬಳಿ ತನಿಖೆಗಾಗಿ ಇಟ್ಟುಕೊಂಡು, ಡಿ.ವಿ.ಡಿ.ಯನ್ನು ವಶಕ್ಕೆ ಪಡೆದಿರುತ್ತಾರೆ. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ತನಿಖಾಧಿಕಾರಿಯವರು ನಿರ್ವಹಿಸಿರುತ್ತಾರೆ.

iii) ಅದೇ ದಿನ ಅಂದರೆ ದಿ: 30/07/2019ರಂದು ತನಿಖಾಧಿಕಾರಿಯವರ ಮುಂದೆ ಆನಂದ ಷಾ ತಳಕಲ್, ಸಿಪಿಸಿ ಹಾಗೂ ಗಂಗಾಧರ ಸಿ. ಸಂಕಪ್ಪರವರು ಹಾಜರಿದ್ದು, ಅವರನ್ನು ಪಂಚರಿಗೆ ಪರಿಚಯಿಸಿ, ಅವರುಗಳ ಮಾದರಿ ಧ್ವನಿಗಳನ್ನು ಪಡೆಯುವ ಬಗ್ಗೆ ಪಂಚರಾಗಿ ಸಹಕರಿಸಲು ತನಿಖಾಧಿಕಾರಿಯವರು ಕೋರಿದಾಗ ಪಂಚರು ಒಪ್ಪಿರುತ್ತಾರೆ. ದಿ: 07/07/2018ರಂದು ಮುದ್ರಿಸಿಕೊಂಡಿದ್ದ ಆಡಿಯೋ ಮತ್ತು ವೀಡಿಯೋ ಕ್ಲಿಪಿಂಗ್ಸ್‌ಗಳಲ್ಲಿರುವ ಸಂಭಾಷಣೆಯ ಕೆಲವು ಭಾಗಗಳನ್ನು ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಲಿಪಿಕರಣಗೊಳಿಸಿ, ಆ ಲಿಪಿಕರಣಗೊಳಿಸಿದ ಪ್ರತಿಯನ್ನು ತನಿಖಾಧಿಕಾರಿಯವರು ಶ್ರೀ. ಆನಂದ್ ಮತ್ತು ಶ್ರೀ. ಗಂಗಾಧರರವರ ಮೂಲಕ ಓದಿಸಿ, ಆ ಸಂಭಾಷಣೆಗಳನ್ನು ಧ್ವನಿ ಮುದ್ರಕದಲ್ಲಿ ಧ್ವನಿಮುದ್ರಿಸಿಕೊಂಡಿದ್ದು, ಧ್ವನಿಮುದ್ರಿಸಿಕೊಂಡಿದ್ದ ಸಂಭಾಷಣೆಗಳನ್ನು ಲ್ಯಾಪ್‌ಟಾಪ್ ಮೂಲಕ ಎರಡು ಸಿ.ಡಿ.ಗಳಿಗೆ ವರ್ಗಾಯಿಸಿ, ಆ ಸಿ.ಡಿ.ಗಳನ್ನು

ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ಮಾದರಿ ಧ್ವನಿಯನ್ನು ಪಡೆದುಕೊಂಡ ಬಗ್ಗೆ ವಿವರವಾದ ಪಂಚನಾಮೆಯನ್ನು ತನಿಖಾಧಿಕಾರಿಯವರು ನಿರ್ವಹಿಸಿರುತ್ತಾರೆ.

**iv)** ದಿ: 30/07/2019ರಂದು ತನಿಖಾಧಿಕಾರಿಯವರು ಪಂಚರು ಹಾಗೂ ಆನಂದ್‌ರವರ ಜೊತೆಗೆ ಹಾವೇರಿ ಜಿಲ್ಲಾ ಆಸ್ಪತ್ರೆಯ ಮೊದಲನೇ ಮಹಡಿಯ ರೂಂ.ನಂ.30 ಓಪಿಡಿ ಕೊಠಡಿಗೆ ತೆರಳಿ, ಅಲ್ಲಿದ್ದ ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ॥ ನಾಗರಾಜನಾಯ್ಕರವರನ್ನು ಭೇಟಿಮಾಡಿ, ಅವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

**v)** ದಿ: 31/07/2019ರಂದು ತನಿಖಾಧಿಕಾರಿಯವರು ಎದುರುದಾರರಾದ ಡಾ॥ ಎಲ್.ಎಲ್. ರಾಥೋಡ್‌ರವರ ಮಾದರಿಧ್ವನಿಯನ್ನು ಪಡೆಯುವ ಬಗ್ಗೆ ಅವರನ್ನು ಠಾಣೆಗೆ ಕರೆಯಿಸಿ ಪಂಚರನ್ನು ಬರಮಾಡಿಕೊಂಡು ಪಂಚರಿಗೆ ಎದುರುದಾರರ ಮಾದರಿ ಧ್ವನಿಯನ್ನು ಪಡೆದುಕೊಳ್ಳುವ ಬಗ್ಗೆ ತನಿಖೆಗೆ ಸಹಕರಿಸುವಂತೆ ಕೋರಿದಾಗ ಅವರು ಒಪ್ಪಿರುತ್ತಾರೆ. ದಿ: 07/07/2018ರಂದು ಮುದ್ರಿಸಿಕೊಂಡಿದ್ದ ಆಡಿಯೋ ವೀಡಿಯೋ ಕ್ಲಿಪಿಂಗ್ಸ್‌ಗಳಲ್ಲಿರುವ ಸಂಭಾಷಣೆಯನ್ನು ತನಿಖಾಧಿಯವರು ಲಿಪಿಕರಣಗೊಳಿಸಿ, ಲಿಪಿಕರಣಗೊಳಿಸಿದ ಸಂಭಾಷಣೆಯನ್ನು ಮೂರುಬಾರಿ ಎದುರುದಾರರಿಂದ ಓದಿಸಿ ಧ್ವನಿಮುದ್ರಿಸಿಕೊಂಡಿದ್ದು, ಧ್ವನಿಮುದ್ರಿಸಿಕೊಂಡಿರುವ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿ, ಆ ಸಿ.ಡಿ.ಯನ್ನು ಎದುರುದಾರರ ಮಾದರಿ ಧ್ವನಿಯನ್ನಾಗಿ ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ಸದರಿ ಪ್ರಕ್ರಿಯೆಗಳ ಬಗ್ಗೆ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ ಎದುರುದಾರರು ಅವರ ಸಮಜಾಯಿಷಿಯಲ್ಲಿ "ದಿ: 07/07/2018ರಂದು ವೈದ್ಯಕೀಯ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಆ ದಿನ ಕೆ.ಜಿ.ಐ.ಡಿ. ಪಾಲಿಸಿ ವೈದ್ಯಕೀಯ ಪರೀಕ್ಷೆಗೆ 6 ರಿಂದ 7 ಜನ ಬಂದಿದ್ದರು, ಅವರೆಲ್ಲರನ್ನು ಪರೀಕ್ಷೆಮಾಡಿ ಎಲ್ಲಾ ಕಾಲಂಗಳನ್ನು ನಾನೇ ತುಂಬಿ ಹಸ್ತಾಕ್ಷರ ಹಾಕಿರುತ್ತೇನೆ. ಹಣದ ಬೇಡಿಕೆ ಇಟ್ಟಿರುವುದಿಲ್ಲ, ಯಾರಿಂದಲೂ ಹಣ ಪಡೆದಿರುವುದಿಲ್ಲವೆಂದು" ಬರೆದುಕೊಟ್ಟಿರುತ್ತಾರೆ.

vi) ತನಿಖಾಧಿಕಾರಿಯವರು ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರಿಂದ ಮತ್ತು ಕ.ಸ.ವಿ. ಇಲಾಖೆ, ಜಿಲ್ಲಾ ವಿಮಾಧಿಕಾರಿಗಳ ಕಛೇರಿಯಿಂದ ಪಡೆದುಕೊಂಡಿರುತ್ತಾರೆ. ಇತರೆ ಸಂಬಂಧಪಟ್ಟ ದಾಖಲೆಗಳನ್ನು ಪಡೆದುಕೊಂಡು, ಸಾಕ್ಷಿದಾರರ ಹೇಳಿಕೆ, ಧ್ವನಿ ವಿಶ್ಲೇಷಣಾ ವರದಿ ಮತ್ತು ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

vii) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಮತ್ತು ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳು ಹಾಗೂ ಇತರೆ ಅಂಶಗಳು ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

3. ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ದಿ: 02/06/2022ರಂದು ಸಲ್ಲಿಸಿರುತ್ತಾರೆ. ಎದುರುದಾರರು ಅವರ ಆಕ್ಷೇಪಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಎದುರುದಾರರು ಅವರ ಸಮಜಾಯಿಷಿಯ ಅಂತಿಮ ಪ್ಯಾರಾದಲ್ಲಿ ಭ್ರಷ್ಟಾಚಾರ ನಿಗ್ರಹದಳ ಪೋಲೀಸರು ಈಗಾಗಲೇ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಸದರಿ ಪ್ರಕರಣ ವಿಚಾರಣಾ ಹಂತದಲ್ಲಿರುವುದರಿಂದ ಒಂದೇ ವಿಷಯಕ್ಕೆ ಸಂಬಂಧಪಟ್ಟಂತೆ ಇಲಾಖಾ ವಿಚಾರಣೆ ನಡೆಸಲು ಬರುವುದಿಲ್ಲವೆಂದು ತಿಳಿಸುತ್ತಾ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ದೋಷಾರೋಪಣ ಪತ್ರದ ದಾಖಲೆಗಳು ಮತ್ತು ಸಮಜಾಯಿಷಿಯ ಅಂಶಗಳು ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡಾವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣಗಳನ್ನು ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2(12)ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ

4

ಸಂ:ಕಂಪ್ಲೇಂಟ್/ಉಪಲೋಕ್/ಬಿ.ಜಿಎಂ./1556/2022
ಪಿ.ಓ.ಎ.ಆರ್.ಇ-06

ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರಾದ ಡಾ॥ ಶ್ರೀ. ಎಲ್.ಎಲ್. ರಾಥೋಡ್ ಬಿನ್ ಲಕ್ಷ್ಮಣ, ಹಿರಿಯ ತಜ್ಞರು ಹಾವೇರಿ ಜಿಲ್ಲೆರವರ ನಿವೃತ್ತಿ ದಿ: 31/07/2028 ಆಗಿರುತ್ತದೆ. ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಮಾಡಲು ಕರ್ನಾಟಕ ನಾಗರಿಕ ಸೇವಾ –(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 12(3) ರಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16/9/22

**(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)**
ಉಪಲೋಕಾಯುಕ್ತರು-01,
ಕರ್ನಾಟಕ ರಾಜ್ಯ, ಬೆಂಗಳೂರು.